## ಪ್ರಾರ್ಥನೆ

# ಶ್ರೀ ವೈಕುಂಠಗದ್ಯಮ್

**ಕದಾಽಹಂ ಭಗವಂತಂ, ನಾರಾಯಣಂ, ಮಮ ಕುಲ-ನಾಥಂ, ಮಮ ಕುಲದೈವತಂ, ಮಮ ಕುಲಧನಂ, ಮಮ ಭೋಗ್ಯಂ, ಮಮ ಮಾತರಂ, ಮಮ ಪಿತರಂ, ಮಮ ಸರ್ವಂ, ಸಾಕ್ಷಾತ್ಕರವಾಣಿ ಚಕ್ಷುಷಾ ?**



ಭಗವಂತನನ್ನು, ನಾರಾಯಣನನ್ನು, ನನ್ನ ಕುಲನಾಥನನ್ನು, ನನ್ನ ಕುಲದೇವತೆಯನ್ನು, ನನ್ನ ಕುಲಧನವನ್ನು, ನನ್ನ ಭೋಗ್ಯ ವಸ್ತುವನ್ನು, ನನ್ನ ತಾಯಿಯನ್ನು, ನನ್ನ ತಂದೆಯನ್ನು, ನನ್ನ ಸರ್ವಸ್ವವನ್ನು ಯಾವಾಗ ತಾನೇ ನನ್ನ ಕಣ್ಣುಗಳಿಂದ ಪ್ರತ್ಯಕ್ಷವಾಗಿ ನೋಡಬಲ್ಲೆನು ?

**ಕದಾಽಹಂ ಭಗವತ್ಪಾದಾಂಬುಜದ್ವಯಂ ಸಂಗ್ರಹಿ-ಷ್ಯಾಮಿ? ಕದಾಽಹಂ ಭಗವತ್-ಪಾದಾಂಬುಜ-ದ್ವಯ ಪರಿಚರ್ಯಾಶಯಾ ನಿರಸ್ತ-ಸಮಸ್ತೇತರ-ಭೋಗಾಶಃ, ಅಪಗತ-ಸಮಸ್ತ-ಸಾಂಸಾರಿಕ-ಸ್ವಭಾವಃ ತತ್ಪಾದಾಂಬುಜ-ದ್ವಯಂ ಪ್ರವೇಕ್ಷ್ಯಾಮಿ ?**

ಭಗವಂತನ ಅಡಿದಾವರೆಗಳನ್ನು ಯಾವಾಗ ತಾನೇ ಶಿರಸಾ ಧರಿಸಬಲ್ಲೆನು? ಭಗವಂತನ ಅಡಿದಾವರೆಗಳ ಸೇವೆ ಮಾಡಬೇಕೆಂಬ ಆಶೆಯಿಂದ ಇತರ ಭೋಗಾಶೆಗಳನ್ನೆಲ್ಲ ತ್ಯಜಿಸಿ, ಸಮಸ್ತ ಸಾಂಸಾರಿಕ - ಸ್ವಭಾವಗಳನ್ನು ಬಿಟ್ಟು, ಅವನ ಪಾದಾಂಬುಜವನ್ನು ಎಂದು ತಾನೇ ಪ್ರವೇಶಿಸಬಲ್ಲೆನು ?

**ಕದಾಽಹಂ ಭಗವತ್ಪಾದಾಂಬುಜದ್ವಯಪರಿಚರ್ಯಾ-ಕರಣಯೋಗ್ಯಃ, ತದೇಕಭೋಗಃ, ತತ್ಪಾದೌ ಪರಿಚರಿಷ್ಯಾಮಿ? ಕದಾ ಮಾಂ ಭಗವಾನ್ ಸ್ವಕೀಯಯಾ ಅತಿಶೀತಲಯಾ ದೃಶಾ ಅವಲೋಕ್ಯ, ಸ್ನಿಗ್ಧ-ಗಂಭೀರ-ಮಧುರಯಾ ಗಿರಾ ಪರಿಚರ್ಯಾಯಾಮ್ ಆಜ್ಞಾಪಯಿಷ್ಯತಿ ?**

ಭಗವಂತನ ಅಡಿದಾವರೆಗಳ ಸೇವೆಮಾಡಲು ಯೋಗ್ಯನಾಗಿ, ಆ ಸೇವೆಯೊಂದೇ ಭೋಗವುಳ್ಳವನಾಗಿ ಆ ಪಾದಗಳನ್ನು ಎಂದು ತಾನೇ ಸೇವಿಸಬಲ್ಲೆನು ?

ಯಾವಾಗ ಭಗವಂತನು ತನ್ನ ಶೀತಲವಾದ ದೃಷ್ಟಿಯಿಂದ ನನ್ನನ್ನು ನೋಡಿ, ಸ್ನಿಗ್ಧವೂ, ಗಂಭೀರವೂ, ಮಧುರವೂ ಆದ ಮಾತಿನಿಂದ ತನ್ನ ಸೇವೆಯನ್ನು ಮಾಡಲು ಆಜ್ಞಾಪಿಸುವನು ?

— ಶ್ರೀ ರಾಮಾನುಜಾಚಾರ್ಯ

## ಸಂಸ್ಕೃತ ಸೂಕ್ತಿಗಳು

**ಉ**ಪಕಾರಿಗಳಿಗೆ ಉಪಕಾರಿಯಾಗಿರುವುದರಲ್ಲಿ ಒಳ್ಳೆಯತನವೇನಿದೆ? ಅಪಕಾರಿಗಳಿಗೆ ಉಪಕಾರ ಮಾಡುವವನೇ ಸಜ್ಜನನು.

-ಪಂಚತಂತ್ರ

**ಧ**ರ್ಮದಿಂದ, ವೇದಾಧ್ಯಯನದಿಂದ, ಶಾಸ್ತ್ರಾಭ್ಯಾಸದಿಂದ ದೊರೆಯಬಹುದಾದ ಫಲವೆಲ್ಲವೂ ಕ್ಷಮೆಯೊಂದರಿಂದ ಕೈಸೇರುತ್ತದೆ.

- ಮಹಾಭಾರತ

**ಕ**ಡೆದರೆ ಮರದ ತುಂಡುಗಳಿಂದ ಬೆಂಕಿ ಹುಟ್ಟುತ್ತದೆ. ಅಗೆದರೆ ನೆಲದ ಆಳದಲ್ಲಿ ನೀರು ಸಿಗುತ್ತದೆ. ಹುರುಪಿನಿಂದ ಕೆಲಸ ಮಾಡುವ ಮಾನವನಿಗೆ ಅಸಾಧ್ಯವೆಂಬುದೇ ಇಲ್ಲ. ಸರಿಯಾದ ಕ್ರಮದಲ್ಲಿ ಮಾಡಿದ ಎಲ್ಲ ಯತ್ನಗಳೂ ಫಲವನ್ನು ಕೊಡುತ್ತವೆ.

-ಭಾಸ ಕವಿ

**ಈ** ಲೋಕದಲ್ಲಿ ಧೀರರು, ಧರ್ಮವನ್ನು ತಿಳಿದವರು, ಶ್ರದ್ಧೆಯಿಂದ ಕೂಡಿರುವವರು ತಮ್ಮ ಶರೀರ-ಮಾತು-ಮನಸ್ಸುಗಳಿಂದ ಉಂಟಾದ ಮಹಾಪಾಪವನ್ನು ಕೂಡ ಬಿದಿರಿನ ಪೊದೆಯನ್ನು ಬೆಂಕಿ ಸುಡುವಂತೆ, ಸುಟ್ಟು ಎಸೆಯುತ್ತಾರೆ.

-ಭಾಗವತ

**ನಾ**ಲಗೆಯ ತುದಿಯಲ್ಲಿಯೇ ಲಕ್ಷ್ಮಿ ನೆಲೆಸಿದ್ದಾಳೆ. ಮಿತ್ರರೂ ಬಾಂಧವರೂ ಇರುವುದು ನಾಲಗೆಯ ತುದಿಯಲ್ಲಿಯೇ. ಬಂಧನವೂ ಅದರಿಂದಲೇ; ನಿಜವಾಗಿ ಮರಣವೂ ಅದರಿಂದಲೇ.

-ಸುಭಾಷಿತ

**ಸೋ**ಮಾರಿತನವು ಮನುಷ್ಯರ ಶರೀರದೊಳಗೇ ಇರುವ ದೊಡ್ಡ ಶತ್ರು. ಹಾಗೆಯೇ ಕಾಯಕಕ್ಕೆ ಸಮನಾದ ಬಂಧುವೂ ಇಲ್ಲ. ಕೆಲಸ ಮಾಡುತ್ತಿರುವವನು ಎಂದೂ ಕೆಡುವುದಿಲ್ಲ.

-ಭರ್ತೃಹರಿಯ ನೀತಿಶತಕ